ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸರ್ಕಾರಿ ಸ್ಕೂಲ್ ಆಫ್ ನರ್ಸಿಂಗ್‌ನಲ್ಲಿ ತರಬೇತಿ ಪಡೆಯುತ್ತಿರುವ 14 ಪರಿಶಿಷ್ಟ ಜಾತಿ ಮತ್ತು 2 ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನವನ್ನು ಜಿಲ್ಲಾ ಪಂಚಾಯತ್ ಬೆಂಗಳೂರು (ಪ) ಜಿಲ್ಲೆಯಿಂದ ರೂ. 47,267.00 ಅನುದಾನ ಬಿಡುಗಡೆ ಮಾಡಲಾಗಿದೆ. ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ (ದಕ್ಷಿಣ) ರವರು ಚೆಕ್ಕನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ.

2) ಉದ್ಭವಿಸುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆ ಭರ್ತಿ

1590 (2036) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದಿಂದ ಕರೆಯಬೇಕಿರುವ ಒಟ್ಟು ಬ್ಯಾಕ್‌ಲಾಗ್ ಹುದ್ದೆಗಳೆಷ್ಟು?

ಆ) ಎಲ್ಲಾ ಹುದ್ದೆಗಳನ್ನು ಸರ್ಕಾರ ಒಮ್ಮೆಲೆ ಕರೆಯಲಿಲ್ಲ ಏಕೆ: ಒಟ್ಟು ಅಭ್ಯರ್ಥಿ 4 ಅಥವಾ 5 ಇಲಾಖೆಗೆ ಅರ್ಜಿ ಸಲ್ಲಿಸಿ ಎಲ್ಲ ಕಡೆ ಆಯ್ಕೆಯಾದಾಗ ಆತ ಒಂದು ಕಡೆ ತನ್ನನ್ನು ಅರ್ಹಗೊಳಿಸಿಕೊಂಡಾಗ ಉಳಿದ ಇಲಾಖೆಗಳಲ್ಲಿನ ಆ ಹುದ್ದೆ ಭರ್ತಿ ಮಾಡಲು ಮತ್ತೆ ವಿಳಂಬವಾಗುವುದಿಲ್ಲವೆ:

ಇ) ಇಲಾಖೆವಾರು ಅರ್ಜಿಗಳನ್ನು ಕರೆದಾಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದ ಅಭ್ಯರ್ಥಿಗಳಿಗೆ ಹಿಂಸೆಯಾಗುವುದಿಲ್ಲವೆ?

ಈ) ಈಗಾಗಲೇ ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು:ಪೂರ್ಣಗೊಳ್ಳಲಿರುವ ಹುದ್ದೆಗಳೆಷ್ಟು:ಇನ್ನೂ ಎಷ್ಟು ಇಲಾಖೆಗಳವರು ಬಾಕಿ ಹುದ್ದೆಗಳನ್ನು ಕರೆಯಬೇಕಿದೆ: ವಿವರ ಅಂಕಿ ಸಂಖ್ಯೆಗಳಲ್ಲಿ ತಿಳಿಸಿ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ದಿನಾಂಕ 25-2-2003ರ ದಿನಾಂಕದಲ್ಲಿದ್ದಂತೆ ಸರಕಾರವು ಸರಕಾರಿ ಇಲಾಖೆಗಳು / ಮಂಡಳಿ/ನಿಗಮಗಳು/ಸಹಕಾರಿ ಸಂಸ್ಥೆಗಳಲ್ಲಿನ 16,737 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿದೆ.

ಆ) ನೇಮಕಾತಿ ಪ್ರಾಧಿಕಾರಿಗಳು ಬೇರೆ ಬೇರೆ ಹುದ್ದೆಗಳಿಗೆ ಬೇರೆ ಬೇರೆ ಆಗಿರುವುದರಿಂದ ಒಮ್ಮೆಗೆ ಎಲ್ಲಾ ಹುದ್ದೆಗಳನ್ನು ಪ್ರಕಟಿಸಲು ಸಾಧ್ಯವಾಗುವುದಿಲ್ಲ. ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಕಡೆ ಆಯ್ಕೆ ಹೊಂದಿ, ಮತ್ತು ಆಯ್ಕೆಯಾದ ಅಭ್ಯರ್ಥಿ ಹುದ್ದೆಗೆ ಹಾಜರಾಗದೇ ಇದ್ದಲ್ಲಿ ಆ ಹುದ್ದೆಗಳನ್ನು ಮೆರಿಟ್ ಪ್ರಕಾರ ತಯಾರಿಸಿದ ಕಾದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಇ) ಅಭ್ಯರ್ಥಿಯ ಆಯ್ಕೆಯು ವಿಶೇಷ ನೇಮಕಾತಿ ನಿಯಮಗಳ ಪ್ರಕಾರ ಇಲಾಖೆವಾರು ಹುದ್ದೆವಾರು ಆಗುವುದರಿಂದ ಅಭ್ಯರ್ಥಿಯ ಆರ್ಥಿಕ ಪರಿಸ್ಥಿತಿ ಪರಿಗಣಿಸಲು ಸಾಧ್ಯವಾಗುವುದಿಲ್ಲ.

ಈ) ದಿನಾಂಕ 25-2-2003ಕ್ಕೆ ಕೊನೆಕೊಂಡಂತೆ 5276 ಅಭ್ಯರ್ಥಿಗಳು ಆಯ್ಕೆಯಾಗಿದ್ದು ಇವುಗಳಲ್ಲಿ 3643 ಅಭ್ಯರ್ಥಿಗಳನ್ನು ತುಂಬಲಾಗಿದೆ. ಕೇವಲ 1286 ಹಿಂಬಾಕಿ ಹುದ್ದೆಗಳಿಗೆ

ಇನ್ನೂ ಅಧಿಸೂಚನೆ ಹೊರಡಿಸಬೇಕಾಗಿದೆ. ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಹಿಂಬಾಕಿ ಹುದ್ದೆಗಳನ್ನು ತುಂಬದ ಇಲಾಖೆಗಳು ಸಂಸ್ಥೆಗಳ ವಿವರಗಳು

		ಪ.ಜಾ.	ಪ.ಪಂ.
1.	ಸರ್ಕಾರಿ ಕಾಲೇಜುಗಳು	59.00	19.00
2.	ಅನುದಾನಿತ ಸರ್ಕಾರಿ ಪದವಿ ಪೂರ್ವ ಕಾಲೇಜು	24.00	00.00
3.	ಅನುದಾನಿತ ಪ್ರೌಢಶಾಲೆಗಳು	18.00	241.00
4.	ಅನುದಾನಿತ ಪ್ರಾಥಮಿಕ ಶಾಲೆಗಳು	35.00	67.00
5.	ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	61.00	24.00
6.	ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ	26.00	22.00
7.	*ಮಂಗಳೂರು ವಿಶ್ವವಿದ್ಯಾನಿಲಯ	07.00	10.00
8.	ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ	60.00	10.00
9.	* ಕರ್ನಾಟಕ ವಿಮಾ ಇಲಾಖೆ	01.00	00.00
10.	ಗಣಿ ಮತ್ತು ಭೂ ವಿಜ್ಞಾನ ಇಲಾಖೆ	12.00	02.00
11.	*ಕಂದಾಯ ಇಲಾಖೆ	17.00	08.00
12.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	93.00	26.00
13.	*ರೇಷ್ಮೆ ಇಲಾಖೆ	100.00	27.00
14.	*ಪತ್ರಗಾರ ಇಲಾಖೆ	00.00	02.00
15.	*ಲೋಕೋಪಯೋಗಿ ಇಲಾಖೆ	29.00	0.00
16.	*ಕೊಳಚೆ ನಿರ್ಮೂಲನ ಮಂಡಳಿ	04.00	04.00
17.	ಕರ್ನಾಟಕ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ	13.00	02.00
18.	ಸಹಕಾರ ಸಂಘ ಸಂಸ್ಥೆಗಳು	223.00	40.00
	ಒಟ್ಟು	782.00	504.00
		= 1286.00	

209 ಹಿಂಬಾಕಿ ಹುದ್ದೆಗಳನ್ನು ಇಲಾಖೆಗಳಲ್ಲಿ ಗುರುತಿಸಿದ್ದು ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇಲ್ಲದೆ ಇರುವುದರಿಂದ ನೇಮಕಾತಿ ಪ್ರಾಧಿಕಾರಿಗಳು Supernumerary ಹುದ್ದೆಗಳನ್ನು ಸೃಜಿಸಲು ಪರವಾನಿಗೆ ಕೇಳಿವೆ.

1. ಕರ್ನಾಟಕ ರಾಜ್ಯ ಸಹಕಾರಿ ಕರ್ನಾಟಕ ನೇಕಾರರ ಮಹಾಮಂಡಳಿಯು ನಷ್ಟದಲ್ಲಿ ಹಿಂಬಾಕಿ ಹುದ್ದೆಗಳನ್ನು ತುಂಬಲು ಸಂಬಂಧಿಸಿದ ಆಡಳಿತ ಇಲಾಖೆಯು ಕಾರ್ಯದರ್ಶಿಯವರಿಗೆ ಪ್ರಸ್ತಾವನೆ ಸಲ್ಲಿಸಿದೆ. ವಿನಾಯಿತಿ ಕೋರಿದೆ.